ಪಿ.ಡಬ್ಲ್ಯೂ:1

**<u>ಸಾಕ್ಷಿಯನ್ನು ಇಂದು ದಿನಾಂಕಃ 23/04/2024 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು</u>**
**<u>ಪಾಟೀ ಸವಾಲುಃ ಶ್ರೀ.ಎಸ್.ಎಸ್.ಕಳ್ಳಿಗುಡ್ಡ. ಪ್ರತಿವಾದಿ ಪರ ವಕೀಲರಿಂದ</u>**

1. ಹುಣಶ್ಯಾಳ ಗ್ರಾಮದ ಮೂಲತ ಜಮೀನ ಸರ್ವೆ ನಂಬರ 51 ಚಪ್ಪರಬಂದರವರ ಮನೆತನಕ್ಕೆ ಸೇರಿತ್ತು ಎಂದರೆ ಸರಿ. ಸದರಿ ಚಪ್ಪರಬಂದರವರು ಸದರಿ ಜಮೀನವನ್ನು ಮಾರಾಟಕ್ಕೆ ತೆಗೆದಾಗ ಮೊದಲು ಖರೀದಿ ಮಾಡಿದವರು 1 ನೇ ಪ್ರತಿವಾದಿ ಹಾಗೂ ಅವರ ಸಹೋದರರು ಎಂದರೆ ಸರಿಯಲ್ಲ. ನಾವು ಮೊದಲು ಖರೀದಿ ಮಾಡಿರುತ್ತೇವೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಸರ್ವೆ ನಂ.51 ನ್ನು 3 ಭಾಗಗಳನ್ನು ಮಾಡಲಾಗಿದೆ ಎಂದರೆ ಸರಿ. ಸದರಿ ಜಮೀನದ 1 ನೇ ಹಿಸ್ಸಾ ನಿಂಗೊಂಡಪ್ಪ ಮುಳವಾಡರವರ ಮಕ್ಕಳಾದ ರಮೇಶ ಹಾಗೂ ದೀಲಿಪಕುಮಾರವರಿಗೆ ಬಂದಿರುತ್ತದೆ ಎಂದರೆ ಸರಿ. ನಾನು ಜಮೀನ ಸರ್ವೆ ನಂಬರ 51/2 ನ್ನು ಸನ್-1984 ರಲ್ಲಿ ಖರೀದಿ ಮಾಡಿರುತ್ತೇನೆ. ಮೂಲತ ಜಮೀನು ಸರ್ವೆ ನಂಬರ 51 ರ ಒಟ್ಟು ಕ್ಷೇತ್ರ 12 ಎಕರೆ ಮೇಲೆ ಗುಂಟೆ ಇರುತ್ತದೆ. ನಾನು ಕಂದಾಯ ಇಲಾಖೆಯಲ್ಲಿ ಬಹಳಷ್ಟು ವರ್ಷ ಸೇವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಅದರಿಂದ ನಾನು ಆಕಾರಬಂದ, ಚೆಕ್ಕಬಂದಿ ಮತ್ತು ನಕ್ಷೇ ಮತ್ತು ಇತರೇ ದಾಖಲಾತಿಗಳನ್ನು ನೋಡಿ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೇವಲ ಉತಾರೆ ನೋಡಿ ಖರೀದಿ ಮಾಡಿರುತ್ತೇನೆ. ನಾನು ಸರ್ವೆ ನಂಬರ 51 ರ ಚಕ್ಕಬಂದಿ ಆಕಾರಬಂದ ಹಾಗೂ ಇತರೆ ದಾಖಲಾತಿಗಳನ್ನು ಸನ್-2001 ಇಸ್ವಿಯಲ್ಲಿ ನೋಡಿರುತ್ತೇನೆ. ರಮೇಶ ಹಾಗೂ ದೀಲಿಪಕುಮಾರವರ ಒಟ್ಟು ಕ್ಷೇತ್ರ 6 ಎಕರೆ 6 ಗುಂಟೆ ಇದೆ ಎಂದರೆ ಸಾಕ್ಷಿಯು ಗುಂಟೆ ಎಷ್ಟು ಇದೆ ಅಂತ ಗೊತ್ತಿಲ್ಲ ಆದರೆ 6 ಎಕರೆ ಮೇಲೆ ಜಮಿನು ಇದೆ ಅಂತ ನುಡಿಯುತ್ತಾರೆ. ನಾವು ಖರೀದಿ ಮಾಡಿದ ಕ್ಷೇತ್ರ 6 ಎಕರೆ. ಈಗ ನಾನು 3 ಎಕರೆ ಕ್ಷೇತ್ರದ ಕಬ್ಜಾವಹಿವಾಟಿಯಲ್ಲಿರುತ್ತೇನೆ. ನಾವು ಖರೀದಿ ಹಿಡಿದ 6 ಎಕರೆ ಕ್ಷೇತ್ರದಲ್ಲಿ

ನಾನು ಹಾಗೂ 2 ನೇ ಪ್ರತಿವಾದಿಯು ವಾಟ್ನಿ ಮಾಡಿಕೊಂಡಿರುತ್ತೇವೆ.

2. ನಾನು ನ್ಯಾಯಾಲಯಕ್ಕೆ ಸರ್ವೆ ಮಾಡಿದ ವರದಿ ಮತ್ತು ಹರ ಉತಾರೆಯನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಯು ಹಾಜರುಪಡಿಸಿದ ದಾಖಲಾತಿಗಳನ್ನು ತೋರಿಸಲಾಗಿ ಸರ್ವೆ ವರದಿ ಎಲ್ಲಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ದಾಖಲಾತಿಗಳನ್ನು ನೋಡಿ ಇದರಲ್ಲಿ ಸರ್ವೆ ವರದಿ ಇಲ್ಲ ಎಂದು ನುಡಿಯುತ್ತಾರೆ. ನಾನು ಯಾವುದೇ ಸರ್ವೆ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು ಹಾಜರುಪಡಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸಾಕ್ಷಿಯು ಮೂಲತ ಹಾಜರುಪಡಿಸಿದ್ದೆ ಎಂದು ನುಡಿಯುತ್ತಾರೆ.

3. ನಾನು ಕಂಟ್ಮೇಂಟ್ ಪ್ರಕರಣವನ್ನು ಕಾನೂನು ಉಲ್ಲಂಘಣೆ ಆದ ನಂತರ ಮಾಡಿರುತ್ತೇನೆ.

4. ನಾನು ಕಂಟ್ಮೇಂಟ್ ಅರ್ಜಿಯನ್ನು ಕಾನೂನು ಉಲ್ಲಂಘಣೆ ಯಾದ ತಕ್ಷಣವೇ ಹಾಕಿರುತ್ತೇನೆ. ಯಾವ ದಿನಾಂಕದ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿರುತ್ತದೆ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ನನ್ನ ಅಣ್ಣನಾದ ಭೀಮನಗೌಡರವರ ಮಗ ಎಂದರೆ ಸರಿ. ನನ್ನ ಅಣ್ಣ ನನ್ನ ಆಸ್ತಿಯಲ್ಲಿ 1 ಎಕರೆ 20 ಗುಂಟೆಯನ್ನು ಅತೀಕ್ರಮಣ ಮಾಡಿರುತ್ತಾನೆ. ರಮೇಶ ಹಾಗೂ ದೀಲಿಪಕುಮಾರವರು ತನ್ನ ಕ್ಷೇತ್ರವಾದ 6 ಎಕರೆ 6 ಗುಂಟೆ ಹೊರತುಪಡಿಸಿ ಉಳಿದ ಜಮೀನಕ್ಕೆ ನಾನು ಹಾಗೂ 2 ನೇ ಪ್ರತಿವಾದಿ ಕಬ್ಜಾವಹಿವಾಟಿಯಲ್ಲಿ ಇದ್ದೇವೆ ಎಂದರೆ ಸಾಕ್ಷಿಯು ರಮೇಶ ಹಾಗೂ ದೀಲಿಪಕುಮಾರವರು 6 ಎಕರೆ ಮೇಲೆ ಇರುತ್ತದೆ ಎಷ್ಟು ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ರಮೇಶ ಹಾಗೂ ದೀಲಪಕುಮಾರವರು 6 ಎಕರೆ 6 ಗುಂಟೆ ಹೊರತು ಪಡಿಸಿ ಮತ್ತೇ ಎಷ್ಟು ಹೆಚ್ಚಿನ ಜಮೀನವನ್ನು ಅತಿಕ್ರಮಣ ಮಾಡಿರುತ್ತಾರೆ ಎಂಬ ಪ್ರಶ್ನಗೆ ಸಾಕ್ಷಿಯು ಅವರು ಅತಿಕ್ರಮಣ ಮಾಡಿರುತ್ತಾರೆ ಎಂದು ನಾನು ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ.

5. ಸದರಿ ದಾವೆ ಮಾಡಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನಾನು ಈಗ ಸದ್ಯಕ್ಕೆ 2.5 ಎಕೆರೆ ಕ್ಷೇತ್ರದಷ್ಟು ಸ್ವಾದೀನದಲ್ಲಿದ್ದೇನೆ.

6. ನಾನು 2001 ನೇ ಸಾಲಿನಲ್ಲಿ ನಾನು ಅರ್ಜಿ ನೀಡಿದ ಪ್ರಕಾರ ಭೂಸಹಾಯ ಅಧಿಕಾರಿಗಳು ಸರ್ವೆ ಮಾಡಿದ ನಂತರೆ ನೀಡಿದ ಸೀಟನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆಗ ಎಸ್.ಬಿ.ಐಗಳಿಯವರು ತಾಲೂಕಾ ಸರ್ವೆರವರು ಬಂದು ಅಳತೆ ಮಾಡಿರುತ್ತಾರೆ ಎಂದರೆ ಸರಿ. ಸದರಿಯವರು ನೀಡಿರುವ ಸರ್ವೆ ವರದಿ ಸರಿಯಾಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ 1 ನೇ ಪ್ರತಿವಾದಿಯು ಹಾಜರುಪಡಿಸಿದ ಸರ್ವೆ ವರದಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಎಸ್.ಬಿ.ಐಗಳಿಯವರೆ ನೀಡಿದ ಸರ್ವೆ ವರದಿ ಎಂದು ಗುರುತಿಸಿರುತ್ತಾರೆ. ಆದ ಕಾರಣ ಸದರಿ ಸರ್ವೆ ವರದಿಯ್ನ್ನು ನಿಡಿ -1 ಎಂದು ಗುರುತಿಸಲಾಯಿತು. ಸದರಿ ವರದಿಯನ್ನು 51/1 ಜಮೀನದ ಮಾಲೀಕರ ಜಾಗದಲ್ಲಿ ಜಮೀನ ಸರ್ವೆ ನಂ.51/2 ರ ಮಾಲೀಕರು 1 ಎ -00 ಗುಂಟೆಯನ್ನು ಅತಿಕ್ರಮಣ ಮಾಡಿರುತ್ತಾರೆಂದು ಬರೆದ ಷರಹ ಸರಿ ಇರುತ್ತದೆ. ಸರ್ವೆ ನಂ.ಬರ 51/3 ರ ಮಾಲೀಕರು ಆದ ನನ್ನ ಅಣ್ಣನ ಮಗ ನನ್ನ ಜಮೀನದಲ್ಲಿ 1 ಎಕರೆ 20 ಗುಂಟೆಯನ್ನು ಅತಿಕ್ರಮಣ ಮಾಡಿರುತ್ತಾನೆ ಎಂದರೆ ಸರಿ. ಸದರಿ ಪ್ರಕಾರ ಷರ ಕೂಡಾ ಸರಿ ಇರುತ್ತದೆ. ಸರ್ವವೆ ನಂಬರ 51/4 ರ ಮಾಲೀಕರು 2 ನೇ ಪ್ರತಿವಾದಿಯ ಜಮೀನದಲ್ಲಿ 2 ಎಕರೆ ದಷ್ಟು ಅತಿಕ್ರಮಣ ಮಾಡಿರುತ್ತಾರೆ ಎಂದರೆ ಸರಿ. ಜಮೀನ ಸರ್ವೆ ನಂ.51/4 ಮಾಲೀಕರು ಶಿವಪ್ಪ ಗುರುಪಾದಪ್ಪ ಮೇಟಿಯವರು ಇದ್ದರು. ಸದರಿ ಶಿವಪ್ಪ ಮೇಟಿಯವರು 2 ನೇ ಪ್ರತಿವಾದಿಯ ಜಮಿನದಲ್ಲಿ 2 ಎಕರೆ ಕ್ಷೇತ್ರವನ್ನು ಒತ್ತುವರಿ ಮನಾಡಿದರು. ಅದರಂತೆ 2 ನೇ ಪ್ರತಿವಅದಿಯು ನನ್ನ ಜಮೀನದಲ್ಲಿ 1 ಎಕರೆ 20 ಗೂಮಟೆ ಅತಿಕ್ರಮಣ ಮಾಡಿದ್ದು ಅದರಂತೆ ನಾನು 1 ನೇ ಪ್ರತಿವಾದಿಯ ಜಮೀನದಲ್ಲಿ 1 ಎಕರೆ ಜಮೀನವನ್ನು ಒತ್ತುವರಿ ಮಾಡಿರುತ್ತೇನೆ ಎಂದರೆ ಸರಿ. ಪ್ರಸ್ತೂತ ದಾವೆಯಲ್ಲ ಶಿವಪ್ಪ ಗುರುಪಾದಪ್ಪ ಮೇಟಿಯವರನ್ನು ಪಕ್ಷಗಾರರಾಗಿ ಸೇರಿಸಿರುವುದಿಲ್ಲ. ಸದರಿ ಶಿವಪ್ಪ

ಮೇಟಿಯವರು 2 ನೇ ಪ್ರತಿವಾದಿಯ ಜಮೀನದಲ್ಲಿ ಒತ್ತುವರಿ ಮಾಡಿದ್ದರಿಂದ 2 ನೇ ಪ್ರೆತಿವಾದಿಯು ನನ್ನ ಜಮೀನದಲ್ಲಿ ಒತ್ತುವರಿ ಮಾಡಿದ್ದರಿಂದ ನಾನು ಸದರಿಯವರ ವಿರುದ್ದ ದಾವೆ ಹೂಡಬೇಕೆ ಹೊರುತು 1 ನೇ ಪತ್ರಿವಾದಿಯ ವಿರುದ್ದ ಅಲ್ಲ ಎಂದರೆ ನಾನು 1 ನೇ ಪ್ರತಿವಾದಿಯ ವಿರುದ್ದ ದಾವೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು 1 ನೇ ಪ್ರತಿವಾದಿಯು ವಿರುದ್ದ ದಾವೆ ಹೋಡಿದ್ದರು 1 ನೇ ಪ್ರತಿವಾದಿಯು 1 ಎಕರೆ ಕ್ಷೇತ್ರವನ್ನು ವಾದಿಯೆ ಅತಿಕ್ರಮಣ ಮಾಡಿದ ಸದರಿಯದ್ದನ್ನು ಬಿಡಿಸಿ ಕೊಡಬೇಂದು ಎದುರು ಕ್ಲೇಮು ಹಾಕಿರುತ್ತಾರೆ ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರೆತಿವಾದಿ ಹಾಗೂ ಆತನ ಸಹೋದರ ದೀಲಿಪ ಅವರು ಉದ್ಯೋಗ ಸಲುವಾಗಿ ಬೇರೆ ಊರಲ್ಲಿ ವಾಸ ಇದ್ದಾರೆ ಎಂದರೆ ಸಾಕ್ಷಿಯು ಇಲ್ಲ ಹುಣಶ್ಯಾಳದಲ್ಲಿಯೆ ವಾಸ ಇದ್ದಾರೆ ಎಂದು ನುಡಿಯುತ್ತಾರೆ.

1 ನೇ **ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ, ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.